**ಇಂದು ದಿನಾಂಕ:*10.12.2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲು : ವಾದಿ ಪರ ಶ್ರೀ. ಬಿ.ಎಂ.ಕೆ.ವಕೀಲರಿಂದಃ**

ದಾವಾ ಐಟಂ ನಂಬರ್ 11 ಮತ್ತು 12 ಕ್ಕೆ ಸಂಬಂಧಿಸಿದಂತೆ ಮಾಡಲಾಗಿದ್ದ ಭೋಗ್ಯವನ್ನು ನನ್ನ ತಂದೆ ತಿರುವಳಿ ಮಾಡಿಸಿಕೊಂಡಿದ್ದಾರೆ. ಭೋಗ್ಯ ಮಾಡಿದ್ದ ಆಸ್ತಿಗಳನ್ನು ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿ. ವಿಭಾಗ ಮಾಡಿಕೊಂಡ ನಂತರ ನಾವು ಆಸ್ತಿಗಳನ್ನು ಖರೀದಿಸಿರುವ ಬಗ್ಗೆ ದಾಖಲೆಗಳು ಇವೆ. ಆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯೆ ಎಂದರೆ ಬ್ಯಾಂಕ್ ಗೆ ಕೊಟ್ಟಿದ್ದೇವೆ ಆದ್ದರಿಂದ ನಾವು ಕೊಡುವುದಿಲ್ಲ.

ವಿಭಾಗ ಪತ್ರದಲ್ಲಿ ತೋರಿಸಿಲ್ಲದ ಆಸ್ತಿಗಳನ್ನು ವಿಭಾಗ ಪತ್ರವಾದ ನಂತರ ಖರೀದಿಸಿದ್ದೇವೆ ಎಂದು ನನ್ನ ಲಿಖಿತ ಹೇಳಿಕೆ ಮತ್ತು ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಆ ರೀತಿ ಹೇಳಲು ತೊಂದರೆ ಇರಲಿಲ್ಲ. ನನ್ನ ತಂಗಿ ಪದ್ಮಾವತಿ ಓದಿಲ್ಲ, ಸಹಿ ಮಾಡುವುದು ಗೊತ್ತು. ವಿಭಾಗ ಪತ್ರಕ್ಕೆ ಜವರಪ್ಪ, ಚಿಕ್ಕಯ್ಯ ಸಾಕ್ಷಿಗಳಾಗಿ ಸಹಿ ಹಾಕಿದ್ದರು. ಪತ್ರವನ್ನು ಯಾರು ಬರೆದಿದ್ದಾರೆ ಎಂದು ಗೊತ್ತಿಲ್ಲ. ದಾವಾ ಆಸ್ತಿಗಳೆಲ್ಲವನ್ನು ವಿಭಾಗ ಪತ್ರದಲ್ಲಿ ಸೇರಿಸಲು ತೊಂದರೆ ಇತ್ತೆ ಎಂದರೆ ನಮ್ಮ ತಂದೆ ಹೇಳಿದ ಹಾಗೆ ವಿಭಾಗ ಪತ್ರ ಮಾಡಲಾಗಿದೆ.

ದಾವಾ ಆಸ್ತಿಗಳ ಮೇಲೆ ಬ್ಯಾಂಕ್ ನಲ್ಲಿ ಸಾಲ ಪಡೆದುಕೊಳ್ಳಲು ಉಪನೊಂದಣಾಧಿಕಾರಿ ಕಚೇರಿಯಲ್ಲಿ ಬಾಂಡ್ ಗೆ ಸಹಿ ಮಾಡಬೇಕಾಗಿದೆ ಎಂದು ನಾನು ಮತ್ತು ಪ್ರತಿವಾದಿಗಳು ವಾದಿಯನ್ನು ಉಪನೊಂದಣಾಧಿಕಾರಿ ಕಚೇರಿಗೆ ಕರೆದುಕೊಂಡು ಹೋಗಿ ವಿಭಾಗ ಪತ್ರಕ್ಕೆ ಹೆಬ್ಬೆರಳು ಗುರುತು ಮಾಡಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಆ ವಿಭಾಗ ಪತ್ರಕ್ಕೆ ವಾದಿಗೆ ಯಾವುದೇ ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಿಭಾಗ ಪತ್ರ ಆದ ನಂತರ ಕೆಲವು ಆಸ್ತಿಗಳನ್ನು

ಖರೀದಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ಉತ್ತಮ ಮತ್ತು ಮಧ್ಯಮವಾಗಿ ಹಂಚಿಕೊಂಡಿಲ್ಲದ ಕಾರಣ ಯಾವುದೇ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಭಾಗ ಆಗಿಲ್ಲದಿದ್ದರೂ ಸಹ ವಾದಿಗೆ ಭಾಗಾಂಶ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಭಾಗ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**